# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1029 |
| 2 ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 ಉತ್ತರಿಸುವ ದಿನಾಂಕ | : | 22-09-2022 |
| 4 ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಪೊರೇಷನ್ ವೃತ್ತದಿಂದ ಮಲ್ಯರಸ್ತೆಗೆ ಸಾಗುವ ಕಸ್ತೂರ್ ಬಾ ರಸ್ತೆಯ ಕಾಂಕ್ರೀಟೀಕರಣವನ್ನು ಎಷ್ಟು ಮೊತ್ತದಲ್ಲಿ ನಿರ್ವಹಿಸಲಾಗಿದೆ; ಸದರಿ ಕಾಮಗಾರಿಗೆ ಎಷ್ಟು ವರ್ಷಗಳ ಖಾತ್ರಿಯನ್ನು ನೀಡಲಾಗಿದೆ; ಸದರಿ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಿ ಸಾರ್ವಜನಿಕರ ಉಪಯೋಗಕ್ಕೆ ಯಾವಾಗ ಸಮರ್ಪಿಸಲಾಯಿತು; (ವಿವರ ನೀಡುವುದು) | ಕಾರ್ಪೊರೇಷನ್ ವೃತ್ತದಿಂದ ಮಲ್ಯ ರಸ್ತೆಗೆ ಸಾಗುವ ಕಸ್ತೂರ್ ಬಾ ರಸ್ತೆಯ ಕಾಂಕ್ರೀಟೀಕರಣವನ್ನು ರೂ.300.52 ಲಕ್ಷಗಳ ವೆಚ್ಚದಲ್ಲಿ ನಿರ್ವಹಿಸಲಾಗಿತ್ತು. ಸದರಿ ಕಾಮಗಾರಿಯನ್ನು ದಿನಾಂಕ: 10.07.2015 ರಲ್ಲಿ ಪ್ರಾರಂಭಿಸಲಾಗಿದ್ದು, ದಿನಾಂಕ: 16.09.2017 ರಂದು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಸಮರ್ಪಿಸಲಾಗಿದೆ. ಸದರಿ ಕಾಮಗಾರಿಗೆ 02 ವರ್ಷಗಳ ನಿರ್ವಹಣಾ ಅವಧಿಯನ್ನು ನಿಗಧಿಪಡಿಸಲಾಗಿರುತ್ತದೆ. |
| ಆ) | ಕಾರ್ಪೊರೇಷನ್ ವೃತ್ತದಿಂದ ಮಲ್ಯ ರಸ್ತೆಗೆ ಸಾಗುವ ಕಸ್ತೂರ್ ಬಾ ರಸ್ತೆಯ ಕಾಂಕ್ರೀಟೀಕರಣ ಗುತ್ತಿಗೆಯನ್ನು ಪಡೆದವರ್ಯಾರು; ಗುತ್ತಿಗೆದಾರರ ಸಂಪೂರ್ಣ ವಿವರ ನೀಡುವುದು; ಸದರಿ ಗುತ್ತಿಗೆ ದಾರರು ಬಿಬಿಎಂಪಿ ವ್ಯಾಪ್ತಿಯಲ್ಲಿ ಕಳೆದ 05 ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳ ವಿವರ ಮತ್ತು ಸದರಿ ಕಾಮಗಾರಿಗೆ ತಗುಲಿದ ವೆಚ್ಚದೊಂದಿಗೆ ಸಂಪೂರ್ಣ ವಿವರವಾದ ಮಾಹಿತಿ ನೀಡುವುದು; | ಕಾರ್ಪೊರೇಷನ್ ವೃತ್ತದಿಂದ ಮಲ್ಯ ರಸ್ತೆ ಸಾಗುವ ಕಸ್ತೂರ್ ಬಾ ರಸ್ತೆಯ ಕಾಂಕ್ರೀಟೀಕರಣ ಕಾಮಗಾರಿಯ ಗುತ್ತಿಗೆಯನ್ನು ಶ್ರೀ.ಎಂ.ನಾಗೇಶ್ (ಮೆ॥ ಸಾಯಿ ತ್ರಿಷಾ ಇನ್ಫ್ರಾ ಇಂಜಿನಿಯರ್ಸ್ ಪ್ರೈ.ಲಿ.) ರವರು ನಿರ್ವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಕಳೆದ 5 ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತವೆ. |

| ಕ್ರ. ಸಂ. | ಕಾಮಗಾರಿಯ ಹೆಸರು | ಯೋಜನೆ ಮೊತ್ತ (ರೂ. ಕೋಟಿಗಳಲ್ಲಿ) | ಪಾವತಿಸಿರುವ ಮೊತ್ತ (ರೂ. ಕೋಟಿಗಳಲ್ಲಿ) | ಷರಾ |
|---|---|---|---|---|
| 1 | ಟೆಂಡರ್ ಶ್ಯೂರ್ ಕಾಮಗಾರಿ- ಪ್ಯಾಲೆಸ್ ರಸ್ತೆ | 25.91 | 19.26 | ಬಹುತೇಕ ಪೂರ್ಣಗೊಂಡಿರುತ್ತದೆ. |
| 2 | ಕಲಾಸಿಪಾಳ್ಯ ಮಾರುಕಟ್ಟೆ ಅಭಿವೃದ್ಧಿ | 9.29 | 6.50 | ಬಹುತೇಕ ಪೂರ್ಣಗೊಂಡಿರುತ್ತದೆ. |

. . .2/-

| | | |
|---|---|---|
| | | <table><tr><td>3</td><td>ಬಾಲಗಂಗಾಧರ್ ಸ್ವಾಮೀಜಿ ಮೇಲ್ಸೇತುವೆ ಡಾಂಬರೀಕರಣ</td><td>5.90</td><td>5.90</td><td>ಬಹುತೇಕ ಪೂರ್ಣಗೊಂಡಿರುತ್ತದೆ.</td></tr><tr><td colspan="2">ಒಟ್ಟು</td><td>41.10</td><td>31.66</td><td></td></tr></table> |
| ಇ) | ಕಾರ್ಪೋರೇಷನ್ ವೃತ್ತದಿಂದ ಮಲ್ಯರಸ್ತೆಗೆ ಸಾಗುವ ಕಸ್ತೂರ್ ಬಾ ರಸ್ತೆಯ ಕಂಠೀರವ ಕ್ರೀಡಾಂಗಣದ ಮುಖ್ಯ ದ್ವಾರದ ಮುಂಭಾಗದಲ್ಲಿ ಕಬ್ಬನ್ ಪಾರ್ಕ್ ಬದಿಯಲ್ಲಿ ಕಾಂಕ್ರೀಟೀಕರಣ ಗೊಂಡ ರಸ್ತೆಯು ಸಂಪೂರ್ಣ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರಸ್ತೆಯ ದುರಸ್ತಿಯನ್ನು ಸದರಿ ರಸ್ತೆ ನಿರ್ಮಿಸಿದ ಗುತ್ತಿಗೆದಾರ ರಿಂದಲೇ ಮಾಡಿಸಲು ಅಥವಾ ಸದರಿ ರಸ್ತೆಯ ದುರಸ್ತಿಗೆ ತಗುಲುವ ಮೊತ್ತವನ್ನು ಅವರಿಂದಲೇ ವಸೂಲು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕಾರ್ಪೋರೇಷನ್ ವೃತ್ತದಿಂದ ಮಲ್ಯರಸ್ತೆಗೆ ಸಾಗುವ ಕಸ್ತೂರ್ ಬಾ ರಸ್ತೆಯ ಕಂಠೀರವ ಕ್ರೀಡಾಂಗಣದ ಮುಖ್ಯ ದ್ವಾರದ ಮುಂಭಾಗದಲ್ಲಿ ಕಬ್ಬನ್ ಪಾರ್ಕ್ ಬದಿಯಲ್ಲಿ ಕಾಂಕ್ರೀಟೀಕರಣಗೊಂಡ ರಸ್ತೆಯ ಬದಿಯಲ್ಲಿ ಸ್ವಲ್ಪ ಭಾಗವು ಕುಸಿದಿರುವುದು ಗಮನಕ್ಕೆ ಬಂದಿರುತ್ತದೆ.<br><br>ಸದರಿ ರಸ್ತೆಯ ಕಾಂಕ್ರೀಟೀಕರಣ ಕಾಮಗಾರಿಯನ್ನು ದಿನಾಂಕ: 10-07-2015 ರಂದು ಪ್ರಾರಂಭಿಸಿ ದಿನಾಂಕ: 16-09-2016 ರೊಳಗೆ ಪೂರ್ಣಗೊಳಿಸಿದ್ದು, ಟೆಂಡರ್ ಕರಾರಿನ ಅನ್ವಯ ಎರಡು ವರ್ಷಗಳ ದೋಷ ಬಾಧ್ಯತಾ ಅವಧಿಯು ದಿನಾಂಕ: 16-09-2018ಕ್ಕೆ ಪೂರ್ಣಗೊಂಡಿದ್ದು, ಕುಸಿದಿರುವ ರಸ್ತೆ ಬದಿಯಲ್ಲಿ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ತ್ಯಾಜ್ಯನೀರು ಸಂಸ್ಕರಣಾ ಘಟಕವಿದ್ದು, ಕಾಂಕ್ರೀಟ್ ರಸ್ತೆ ಭಾಗ ಕುಸಿಯಲು ಕಾರಣವೇನು ಎಂಬ ಬಗ್ಗೆ ಪರಿಣಿತರಿಂದ ಪರಿಶೀಲನೆ ಕೈಗೊಂಡು, ತದನಂತರ ವರದಿಯ ಆಧಾರದ ಮೇಲೆ ಸದರಿ ಕುಸಿತಕ್ಕೆ ಗುತ್ತಿಗೆದಾರರು ಕಾರಣರಾಗಿದ್ದಲ್ಲಿ, ಗುತ್ತಿಗೆ ಕರಾರಿನ ನಿಯಮಾವಳಿ ಪ್ರಕಾರ ಗುತ್ತಿಗೆದಾರರಿಂದಲೇ ದುರಸ್ಥಿಪಡಿಸಲು / ವೆಚ್ಚ ವಸೂಲು ಮಾಡಲು ಕ್ರಮವಹಿಸಲಾಗುವುದು. |

**ಸಂಖ್ಯೆ: ನಅಇ 787 ಎಂಎನ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ